ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೇ, ಇವರು ಹೇಳಿರತಕ್ಕಂಥ ವಿಚಾರದಲ್ಲಿ ವಾಸ್ತವಾಂಶವಿದೆ. ಆದಷ್ಟು ಟ್ರಾಫಿಕ್ ಕಂಜೆಶನ್ ಅನ್ನು ಕಡಿಮೆ ಮಾಡುವುದಕ್ಕೆ ಕ್ರಮವನ್ನು ತೆಗೆದಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ ಇಪ್ಪತ್ತೇಳನೆ ಫೆಬ್ರುವರಿ 1996ನೇ ಐದನೆ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ ಎಂಬತ್ತೆಂಟು ಪ್ರಶ್ನೆಗಳ ಪೈಕಿ ಎಂಬತ್ತು ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ತಮ್ಮ ಅಪ್ಪಣೆಯ ಮೇರೆಗೆ ಮಂಡಿಸಿರುತ್ತೇನೆ.

ಬಂದೀಖಾನೆಗಳಲ್ಲಿರುವ ಖೈದಿಗಳು ಹಾಗೂ ಸಿಬ್ಬಂದಿಗಳ ಸಂಖ್ಯೆ

102- ಶ್ರೀ ಅಶೋಕ್ ಎಸ್. ಕಾಟವೆ (ಹುಬ್ಬಳ್ಳಿನಗರ) : ಮಾನ್ಯ ಗೃಹಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಂಧೀಖಾನೆಗಳು ಹಾಗೂ ಅವುಗಳಲ್ಲಿರುವ ಕೈದಿಗಳ ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು?

ಆ) ಒಂದು ದಿನಕ್ಕೆ ಒಬ್ಬ ಕೈದಿಯ ಉಟೋಪಚಾರ ಇತರೇ ಖರ್ಚುಗಳಿಗೆ ತಗಲುವ ವೆಚ್ಚವೆಷ್ಟು?

ಇ) ಪರಾರಿಯಾದ ಕೈದಿಗಳೆಷ್ಟು ಮತ್ತು ಮರಳಿ ಬಂಧಿಸಿದ ಕೈದಿಗಳ ಸಂಖ್ಯೆ ಎಷ್ಟು?

ಈ) ಪರಾರಿಯಾದ ಕೈದಿಗಳ ಪ್ರಕರಣಗಳಲ್ಲಿ ಯಾವುದಾದರೂ ಅಧಿಕಾರಿಗಳು ಭಾಗಿಯಾಗಿರುವುದೇ?

ಉ) ಹಾಗಿದ್ದಲ್ಲಿ ಅಂಥವರ ಮೇಲೆ ಏನು ಕ್ರಮ ಜರುಗಿಸಲಾಗಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ರಾಜ್ಯದಲ್ಲಿ 960 ಬಂಧೀಖಾನೆಗಳಿದ್ದು, ಇವುಗಳಲ್ಲಿ ಇಡಲಾದ ಕೈದಿಗಳು

ಪುರುಷರು	ಮಹಳೆಯರು	ಒಟ್ಟು
7645	184	7229

ಹಾಗೂ ಅಧಿಕಾರಿಗಳು ಸೇರಿ 1368 ಸಿಬ್ಬಂದಿ ವರ್ಗವಿರುತ್ತದೆ.

ಆ) ಒಂದು ದಿನಕ್ಕೆ ಒಬ್ಬ ಕೈದಿಗೆ ಸರಾಸರಿ ವೆಚ್ಚ ರೂ. 55.94

ಇ) 1991-95ರಲ್ಲಿ ಪರಾರಿಯಾದ

ವಿಚಾರಣಾಧೀನ ಬಂದಿಗಳು	28
ಸಜಾ ಕೈದಿಗಳು	5

ಮರಳಿ ಬಂಧಿಸಿದ ಕೈದಿಗಳು

1) ವಿಚಾರಣಾಧೀನ ಕೈದಿಗಳು 9

2) ಸಜಾ ಕೈದಿಗಳು 2

ಈ) ಇಲ್ಲ

ಉ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಪಾನ ನಿಷೇಧ ಜಾರಿಗೆ ಕುರಿತು

98 - ಶ್ರೀ ಅಶೋಕ್. ಎಸ್. ಕಾಟವೆ (ಹುಬ್ಬಳ್ಳಿ ಶಹರ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಾನ ನಿಷೇದ ಜಾರಿಗೆ ತರಲಾಗುವುದೆ? ತರುವುದಾದಲ್ಲಿ ಎಂದಿನಿಂದ ಹಾಗೂ ಇದರಿಂದ ರಾಜ್ಯಕ್ಕೆ ಆಗುವ ಹಣಕಾಸಿನ ಆಭಾವ ಎಷ್ಟು? ಒಂದು ವೇಳೆ ಜಾರಿಗೆ ತಂದಲ್ಲಿ ಆದ ಆಭಾವವನ್ನು ಯಾವ ಕ್ರಮಗಳಿಂದ ಹಣ ಭರಿಸಲಿಕ್ಕೆ ಸಾಧ್ಯವಿದೆ?

ಆ) ಧಾರವಾಡ ಜಿಲ್ಲೆಯಿಂದ ಇದರಿಂದ ಎಷ್ಟು ಹಣ ಆದಾಯ ಬರುವುದು?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ರಾಜ್ಯದಲ್ಲಿ ಪಾನ ನಿರೋಧವನ್ನು ಪುನಃ ಜಾರಿಗೊಳಿಸಲು ಸರ್ಕಾರ ಗಂಭೀರವಾಗಿ ಆಲೋಚಿಸುತ್ತಿದೆ. ಈ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ.

ಆ) ಧಾರವಾಡ ಜಿಲ್ಲೆಯಿಂದ 1994-95 ನೇ ಸಾಲಿನಲ್ಲಿ ರೂ. 30.10 ಕೋಟಿ ಹಾಗೂ 1995-96ನೇ ಸಾಲಿನಲ್ಲಿ (21-2-96ರವರೆಗೆ) ರೂ. 28.82 ಕೋಟಿ ರೂಪಾಯಿ ಸಂಗ್ರಹವಾಗಿದೆ)

ಅಬಕಾರಿ ಇಲಾಖೆಯಲ್ಲಿರುವ ಖಾಲಿ ಹುದ್ದೆಗಳ ಕುರಿತು

243 - ಶ್ರೀ ಅಕೋಕ್ ಎಸ್. ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಬಕಾರಿ ಇಲಾಖೆಯಲ್ಲಿ ಜಿಲ್ಲಾವಾರು ಎಷ್ಟು ಹುದ್ದೆಗಳು ಖಾಲಿ ಇವೆ?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ಅಬಕಾರಿ ಇಲಾಖೆಯಲ್ಲಿ, ಜಿಲ್ಲಾವಾರು ಖಾಲಿ ಹುದ್ದೆಗಳ. ವಿವರ ಈ ಕೆಳಗಿನಂತೆ ಇರುತ್ತದೆ.